UASB LIBRARY
Jai Kisan
Newspaper Clippings
Monday 24-04-2023
Pg. 1

ರೈತ ಮಿತ್ರ

ಹಲಸಿನಲ್ಲಿ ಲಭ್ಯವಿರುವ ತಳಿಗಳಾವುವು? ನಾಟಿ ಮಾಡುವ ವಿಧಾನ ಹೇಗೆ?

| ಗಂಗಾಧರೇಶ್ವರ ಚಿಕ್ಕಬಳ್ಳಾಪುರ

ಹಲಸಿನಲ್ಲಿ ನಾಟಿಗೆ ಲಭ್ಯವಿರುವ ತಳಿಗಳೆಂದರೆ- ಸಿಂಗಪೂರ ಹಲಸು, ಚಂದ್ರಹಲಸು, ರುದ್ರಾಕ್ಷಿ, ಜಾಣಗೆರೆ, ತೂಬಗೆರೆ, ನೆಲುಗುಡಿಗೆ, ರಾಮಚಂದ್ರ, ಮಲೇಷಿಯಾ, ಸಿದ್ದಪ್ಪ, ಲಾಲಬಾಗ್ ಮಧುರ, ಮಲ್ಲೇಶ್ವರಂ ರೆಡ್ ಇನ್ನೂ ಮುಂತಾದವು. ನಾಟಿ ಮಾಡಲು ಸೂಕ್ತ ಕಾಲವೆಂದರೆ ಜೂನ್-ಆಗಸ್ಟ್(ಮುಂಗಾರು) ತಿಂಗಳು. ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ 30೧30 ಅಡಿ ಅಂತರದಲ್ಲಿ 3೧3 ಅಡಿ ಗಾತ್ರದ ಗುಂಡಿಗಳನ್ನು ಏಪ್ರಿಲ್-ಮೇ ತಿಂಗಳಲ್ಲಿ ತೆಗೆಯಬೇಕು. ಪ್ರತಿ ಗುಂಡಿಗೆ ತಳಭಾಗದಲ್ಲಿ ಮೇಲ್ಮಣ್ಣು, 25-30 ಕಿ.ಗ್ರಾಂ ಕೊಳೆತ ಕೊಟ್ಟಿಗೆ ಗೊಬ್ಬರ, 1.0 ಕಿ.ಗ್ರಾಂ ಬೇವಿನ/ಹೊಂಗೆ ಹಿಂಡಿ ಮಿಶ್ರಣವನ್ನು ಹರಡಿ ನಂತರ ತಳ ಪದರಗಳ ಮಣ್ಣನ್ನು ಮೇಲೆ ಹರಡಬೇಕು. ಚೆನ್ನಾಗಿ ಬೆಳೆದ ಕಸಿ ಮಾಡಿದ ಸಸಿಗಳನ್ನು ಪ್ರತಿ ಗುಂಡಿಗೆ ಒಂದರಂತೆ ಕಸಿಗಂಟು ನೆಲಮಟ್ಟದಿಂದ 10-15 ಸೆಂ.ಮೀ. ಎತ್ತರದಲ್ಲಿರುವಂತೆ ನೆಡಬೇಕು. ನೆಟ್ಟ ನಂತರ ಬುಡದ ಸುತ್ತ ಮಣ್ಣನ್ನು ಬಿಗಿಗೊಳಿಸಿ, ಸಸಿ ಬೀಳದಂತೆ ಕೋಲನ್ನು ಆಸರೆಯಾಗಿ ನೆಡಬೇಕು.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

ಮಾವಿನ ಬೆಳೆಯಲ್ಲಿ ಹೂ ಅಂಗಮಾರಿ ರೋಗ (ಬ್ಲಾಸಮ್‌ಬ್ಲೈಟ್) ಕಂಡು ಬರುತ್ತಿದೆ. ಇದನ್ನು ನಿಯಂತ್ರಿಸುವುದು ಹೇಗೆ?

| ಸಂಜಯ ಶ್ರೀನಿವಾಸಪುರ

ಮಾವಿನ ಹೂ ಗೊಂಚಲುಗಳಲ್ಲಿ ಹೂವಿನ ಮೇಲೆ ಕಪ್ಪುಚುಕ್ಕೆ ಕಂಡು ಬಂದು ಹೂಗಳು ಉದುರಲು ಪ್ರಾರಂಭಿಸುತ್ತವೆ. ಕಾಯಿಗಳು ಹಿಡಿಯುವುದಿಲ್ಲ.

ನಿರ್ವಹಣೆ: ಹೂ ಅಂಗಮಾರಿ ರೋಗದ ಹತೋಟಿಗಾಗಿ 2.0 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯು.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಇಬ್ಬನಿ ಬಿದ್ದ ದಿನವೇ ಹೂ ಗೊನೆಗಳಿಗೆ ಚೆನ್ನಾಗಿ ಸಿಂಪಡನೆ ಮಾಡಬೇಕು ಹಾಗೂ ಹೂಬಿಡುವ ಸಮಯದಲ್ಲಿ ಮತ್ತೆ ಇಬ್ಬನಿ ಇದ್ದಲ್ಲಿ ಅದೇ ದಿನ ಮೇಲೆ ಸೂಚಿಸಿದ ಸಿಂಪಡನೆಯನ್ನು ಕೈಗೊಳ್ಳಬೇಕು. 1.0 ಗ್ರಾಂ ಥೈಯೋಫಿನಾಯಿಟ್ ಮಿಥೈಲ್ ಅಥವಾ 1.0 ಗ್ರಾಂ ಕಾರ್ಬನ್ ಡೈಜಿಮ್ ಅಥವಾ 2.0 ಗ್ರಾಂ ಕ್ಲೋರೋಥೆಲೊನಿಲ್ ಅಥವಾ ಪ್ರೊಪಿನೆಬ್ 2.0 ಗ್ರಾಂ + ಇಪ್ರೊಡಿನ್ 15 ದಿನಗಳ ಅಂತರದಲ್ಲಿ ಸಿಂಪಡಿಸಬೇಕು. ಮಾವು ಬಟಾಣಿ ಗಾತ್ರದಲ್ಲಿದ್ದಾಗ ಸಿಂಪಡಣೆಯನ್ನು ಪ್ರಾರಂಭಿಸಬೇಕು.

| ಪ್ರಿಯಾಂಕಾ ಬಿ. ಸಸ್ಯರೋಗ ತಜ್ಞರು

ಕೋಸಿನ ಬೆಳೆಯಲ್ಲಿ ಸತುವಿನ ಮಹತ್ವ ಹಾಗೂ ನಿರ್ವಹಣೆ ಬಗ್ಗೆ ತಿಳಿಸಿ.

| ಕಾಂತರಾಜು ತುರುವೇಕೆರೆ

ಸೂಕ್ಷ್ಮ ಪೋಷಕಾಂಶಗಳು ಮಣ್ಣು ಹಾಗೂ ಬೆಳೆಗಳಲ್ಲಿ ಕಡಿಮೆ ಪ್ರಮಾಣದಲ್ಲಿದ್ದರೂ ಗಿಡಗಳ ಬೆಳವಣಿಗೆ ಹಾಗೂ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ತೋರುತ್ತವೆ. ವಿಶೇಷವಾಗಿ ಕೋಸು ಬೆಳೆಗಳಾದ ಹೂ ಕೋಸು ಮತ್ತು ಎಲೆ ಕೋಸುವಿನಲ್ಲಿ ಸತುವಿನ ಅಂಶವು ಶೀತ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸತುವಿನ ಕೊರತೆ ಕಂಡು ಬಂದರೆ ಎಲೆಗಳು ಹಳದಿ ಮತ್ತು ಕಂಚು ಬಣ್ಣಕ್ಕೆ



ತಿರುಗಿ ಸಸ್ಯಗಳ ಬೆಳವಣಿಗೆ ಕುಂಠಿತಗೊಳ್ಳುತ್ತವೆ. ವಿಳಂಬಿತ ಪ್ರಬುದ್ಧತೆ ಹಾಗೂ ಗಾತ್ರ ಕುಂಠಿತಗೊಳ್ಳುತ್ತದೆ.

ನಿರ್ವಹಣೆ: ಲಕ್ಷಣಗಳು ಕಂಡರೆ ಪ್ರತಿ ಎಕರೆಗೆ 12-13 ಟನ್ ಕೊಟ್ಟಿಗೆ ಗೊಬ್ಬರದ ಜತೆಗೆ 5-10 ಕಿ. ಗ್ರಾಂ ಸತುವಿನ ಸಲ್ಫೇಟ್ ಮಣ್ಣಿಗೆ ಕೊಡುವುದು. ಪ್ರತಿ ಲೀಟರ್ ನೀರಿಗೆ 3-5 ಗ್ರಾಂ ಸತುವಿನ ಸಲ್ಫೇಟ್ ಅನ್ನು ಬೆರೆಸಿ ಸಿಂಪಡಿಸಬೇಕು. ಚಿಲೇಟಡ್ ಸತುವನ್ನು 1-2 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರಿಸಿ ಸಿಂಪಡಿಸುವುದು ಅಥವಾ 1-1.5 ಕಿ.ಗ್ರಾಂ ಅನ್ನು ಹನಿ ನೀರಾವರಿ ಪದ್ಧತಿಯಲ್ಲಿ ಒಂದು ಎಕರೆಗೆ ನೀಡುವುದು.

ಸೂಚನೆ: ರಂಜಕ ಹಾಗೂ ಸತುವನ್ನು ಬೇರೆ ಬೇರೆ ಸಮಯದಲ್ಲಿ ನೀಡಬೇಕು.

| ಲಕ್ಷ್ಮೀ ವಿ. ಮಣ್ಣು ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

24-04-2023
V-karnataka
Pg 06

24-04-2023
Vijayavani
Pg 04

ಶುಂಠಿಯಿಂದ ಹಣ ತೆಗೆಯುವ ಗುಟ್ಟು

ರೈತಗಾಥೆ



ಡಾ. ವಿಜಯ್ ಅಂಗಡಿ

ಕೃಷಿಯಲ್ಲಿ ಚೆನ್ನಾಗಿ ತೊಡಗಿಸಿಕೊಂಡು ಬೆಳವಣಿಗೆಯಾದವರು ನಮ್ಮ ನಾಡಿನಲ್ಲಿ ನೂರಾರು ಕಡೆ ಕಾಣಸಿಗುತ್ತಾರೆ. ಶ್ರಮ, ಜಾಣತನ, ಕ್ರಿಯಾಶೀಲತೆಯನ್ನು ಬಳಸಿಕೊಂಡು ತಮ್ಮ ಬದುಕಿನಲ್ಲಿ ಸ್ಥಿತಿವಂತಿಕೆಯನ್ನು ಕಂಡವರು ಇದ್ದಾರೆ. ಇಲ್ಲಿ ಕುಶಾಲನಗರ ಬಳಿ ಇರುವ ಅರಿಶಿನಗುಪ್ಪೆ ಬಳಿ ತೋಟದ ವಾಸಿ ಎಂ.ಟಿ. ಬೇಬಿ ಅವರ ಬದುಕು ಇತರರಿಗೆ ಅನುಕರಣೀಯ. ಅತ್ಯಲ್ಪ ಜಮೀನು ಇದ್ದ ಇವರಿಗೆ ಭೂಮಿ ಒಲಿಯಿತು. ವರ್ಷ ವರ್ಷಕ್ಕೆ ಇವರ ಬದುಕು ಬದಲಾಯಿತು, ಬೆಳವಣಿಗೆಯಾಯಿತು.

ಕೇರಳ ಮೂಲದ ಎಂ.ಟಿ. ಬೇಬಿ ಅವರು ವಿರಾಜಪೇಟೆ (ತಾ) ಬಾಳೆಲೆ (ಹೋ) ಬಿಳೂರು ಗ್ರಾಮದಲ್ಲಿ ಹುಟ್ಟಿದವರು. ಕೇವಲ 9ನೇ ತರಗತಿವರೆಗೆ ಓದಿರುವ ಇವರು ಕೌಶಲ್ಯದಿಂದ ಶುಂಠಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಟೈಲರಿಂಗ್ ಮಾಡುತ್ತಲೇ ಶುಂಠಿ ಕೃಷಿಗೆ ಕೈ ಹಾಕಿದ ಬೇಬಿ ಅವರು ಪ್ರಾರಂಭದಲ್ಲಿ ನಾಲ್ಕಾರು ವರ್ಷಗಳ ಕಾಲ ಹಣ ಕಳೆದುಕೊಂಡರು. ಆದರೂ ಬಿಡದೇ ಈ ಬೆಳೆಯಲ್ಲಿ ಅನುಭವಗಳನ್ನು ಪಡೆದ ಇವರು ಬೇರೆಯವರ ಜಮೀನುಗಳನ್ನು ಗುತ್ತಿಗೆಗೆ ಪಡೆದು ಶುಂಠಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಅನುಭವಗಳು ಮೈಗೂಡಿದಂತೆಲ್ಲಾ ಇವರು ಶುಂಠಿ ಬೇಸಾಯದಲ್ಲಿ ಹಿಡಿತ ಸಾಧಿಸಿದರು.



ಎಂ.ಟಿ. ಬೇಬಿ

ಬೆಲೆಯ ಏರಿಳಿತದಲ್ಲೂ ಮುನ್ನುಗ್ಗುತ್ತಿರುವ ಇವರ ಸಾಹಸಿ ಗುಣವು ಹಲವರಿಗೆ ಅಚ್ಚರಿಯನ್ನು ತರಿಸುತ್ತದೆ. ಸಾಕಷ್ಟು ಹಣವನ್ನು ಗಳಿಸಿದ್ದರೂ, ಕಳೆದುಕೊಂಡಿದ್ದರೂ ಶುಂಠಿ ಕೃಷಿಯನ್ನು ಬಿಡದೇ 2020ರಲ್ಲಿ 96 ಎಕರೆಯಲ್ಲಿ ಬೆಳೆ ಬೆಳೆದರು. 2019ರಲ್ಲಿ ಚೀಲಕ್ಕೆ 6300/- ರೂಪಾಯಿ ಬೆಲೆ ಸಿಕ್ಕಿತು. 42 ಎಕರೆಯ ಬೆಳೆಗೆ ಈ ಬೆಲೆ ಲಭಿಸಿತು. ಇನ್ನುಳಿದ 8 ಎಕರೆಯ ಬೆಳೆಗೆ ಬೆಲೆ ಕುಗ್ಗಿತು. 2020ರ ಬೆಳೆಗೆ ಇನ್ನೂ ತಗ್ಗಿತು, ನಷ್ಟ ಅನುಭವಿಸುವಂತಾಯಿತು. 1996ರಲ್ಲಿ ಎಕರೆಗೆ 56,000 ರೂಪಾಯಿ ಶುಂಠಿ ಬೆಳೆ ಬೆಳೆಯಲು ವೆಚ್ಚವಾಗುತ್ತಿತ್ತು. ಈಗ 4-5 ಲಕ್ಷ ರೂಪಾಯಿ ಆಗುತ್ತದೆ ಎಂದವರು ಹೇಳಿದ್ದಾರೆ. 2022ರಲ್ಲಿ 46 ಎಕರೆ ಶುಂಠಿಯನ್ನು ಕಣಗಾಲು, ಸರಗೂರು ಸಮೀಪ ಮಾಡಿದ್ದಾರೆ. ಎಕರೆಗೆ 3 ಲಕ್ಷದ 65 ಸಾವಿರ ರೂಪಾಯಿ ಖರ್ಚು ತಗುಲಿದೆಯಂತೆ. 2021ರಲ್ಲಿ650-700 ರೂ., 2020ರಲ್ಲಿ 900 ರೂ. ಬೆಲೆ ಇತ್ತು. 2020, 2021ರಲ್ಲಿ ಅತಿ ಮಳೆಯಿಂದ ಶುಂಠಿ ಬೆಳೆಗೆ ಕೊಳೆರೋಗ ಕಾಣಿಸಿಕೊಂಡಿತು, ಬೆಲೆಯೂ ಕಮ್ಮಿಯಾಯಿತು. 2019ರಲ್ಲಿ ಕೊರೊನಾ ಪರಿಣಾಮ ಮಾರಾಟಕ್ಕೆ ಭಾರೀ ಹೊಡೆತ ಬಿತ್ತು. ಈ ವರ್ಷ 60 ಕಿ.ಗ್ರಾಂ. ಚೀಲಕ್ಕೆ 1800 - 4000 ರೂ.ಗೆ ಮಾರಿದ್ದಾರೆ. ''ಮುಂಬರುವ ದಿನಗಳಲ್ಲಿ ಇನ್ನೂ ಎರಡ್ಮೂರು ಪಟ್ಟು ಧಾರಣೆ ಹೆಚ್ಚಾಗಬಹುದು. ಕರ್ನಾಟಕದ ಶುಂಠಿಗೆ ದೇಶದೆಲ್ಲೆಡೆ ಬೇಡಿಕೆ ಇದೆ. ವ್ಯಾಪಾರಿಗಳು ನಮ್ಮ ರಾಜ್ಯದ ಶುಂಠಿಗೆ ಹೆಚ್ಚು ಬೆಲೆ ಕೊಟ್ಟು ಖರೀದಿಸುತ್ತಾರೆ,'' ಎನ್ನುತ್ತಾರೆ ಬೇಬಿ.

ಕುಶಾಲನಗರದಿಂದ 19 ಕಿ.ಮೀ. ದೂರದಲ್ಲಿರುವ ಅರಿಶಿನಗುಪ್ಪೆ ಗ್ರಾಮದ ಬಳಿ 2001ರಲ್ಲಿ 18 ಎಕರೆ ಜಮೀನನ್ನು ಖರೀದಿಸಿ ಅಲ್ಲಿಯೂ ಶುಂಠಿ ಬೆಳೆದು ಈಗ ಇಡೀ ಜಮೀನಿಗೆ 15 ಅಡಿ ಅಂತರದಲ್ಲಿ ಬೆಣ್ಣೆ ಹಣ್ಣಿನ ಗಿಡಗಳನ್ನು ಹಾಕಿದ್ದಾರೆ. ಬಿಳೂರು ಗ್ರಾಮದಲ್ಲಿ ಇವರ ತಂದೆಗೆ 60 ಸೆಂಟ್ಸ್ ಜಮೀನು ಇತ್ತು. ಆರೋಗ್ಯಕರ ಬೆಳೆಯಿಂದ ಶುಂಠಿ ಬಿತ್ತನೆ ಆಯ್ಕೆ, ನೀರು, ಗೊಬ್ಬರ, ಒಳ್ಳೆಯ ಜಮೀನುಗಳು ಶುಂಠಿ ಬೆಳೆಗೆ ಪೂರಕ ಎನ್ನುವ ಬೇಬಿ ಅವರು, ರೋಗ ಹತೋಟಿಯಲ್ಲೂ ಜಾಗೃತಿ ಬೇಕು, ಬರೀ ಬಿತ್ತನೆಯಿಂದಲ್ಲದೇ, ಯಂತ್ರೋಪಕರಣಗಳಿಂದ, ಪ್ರಾಣಿಗಳಿಂದ, ಮನುಷ್ಯರಿಂದಲೂ ಶುಂಠಿ ಬೆಳೆಗೆ ರೋಗವು ಬರುತ್ತದೆ ಎಂಬಂಶವನ್ನು ಮರೆಯದೇ ಹೇಳುತ್ತಾರೆ.

ಈಗ್ಗೆ ಹತ್ತಾರು ವರ್ಷಗಳಿಂದ ಮೊಟ್ಟೆ ಕೋಳಿಯ ಗೊಬ್ಬರವನ್ನೇ ಬಳಸುತ್ತಿದ್ದಾರೆ. ಬಿತ್ತನೆ ಹಾಕುವ ಮುನ್ನ ಎಕರೆಗೆ 150 ಚೀಲ ಕೋಳಿ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಿ ಬಳಿಕ ಬಿತ್ತನೆ ಶುಂಠಿ ಹಾಕುತ್ತಾರೆ. ಕಳೆನಾಶಕ ಬಳಸಿದ ಬಳಿಕ 10 ದಿನಗಳ ನಂತರ ವೇಸ್ಟ್‌ಡೀಕಾಂಪೋಸರ್ ಸಿಂಪಡಿಸುತ್ತಾರೆ.

ನೆಟ್ಟ 3 ತಿಂಗಳಲ್ಲಿ ಮತ್ತೊಮ್ಮೆ ಕೋಳಿ ಗೊಬ್ಬರವನ್ನು ನೀಡಿ ಮಣ್ಣನ್ನು ಏರಿಸುತ್ತಾರೆ. ಆಗ ಎಕರೆಗೆ 50 ಚೀಲ ಗೊಬ್ಬರ ಬಳಕೆಯಾಗುತ್ತದೆ. ಜುಲೈ- ಆಗಸ್ಟ್‌ನಲ್ಲಿ ಎಕರೆಗೆ ಆರೇಳು ಚೀಲ ಬೇವಿನ ಹಿಂಡಿಯನ್ನು ಕೊಡುತ್ತಾರೆ. ರಾಸಾಯನಿಕ ಗೊಬ್ಬರಗಳನ್ನು ಮೂರು ಕಂತುಗಳಲ್ಲಿ ಪೂರೈಸುತ್ತಾರೆ. ಹೆಚ್ಚು ರಾಸಾಯನಿಕ ಗೊಬ್ಬರಗಳ ಪೂರೈಕೆಯು ಒಳಿತಲ್ಲ ಎನ್ನುವ ಇವರು ಫೆಬ್ರವರಿ ಮಧ್ಯದಿಂದ ಮಾರ್ಚ್ ಮಧ್ಯದಲ್ಲಿ ಬಿತ್ತನೆ ಮುಗಿಸುವುದು ಒಳಿತು ಎಂದಿದ್ದಾರೆ. ಅಕ್ಟೋಬರ್‌ನಲ್ಲಿ ಬೆಳೆ ಆರೋಗ್ಯವಾಗಿದ್ದಲ್ಲಿ ಬಿತ್ತನೆಗೆ ಆಯ್ಕೆ ಮಾಡಿಕೊಳ್ಳಬಹುದು ಎಂದವರು ಹೇಳಿದ್ದಾರೆ.

ಮಗ ಬಿಪಿನ್ ಥಾಮಸ್, ಎಂಬಿಎ ಪೂರೈಸಿ ಅಪ್ಪ- ಅಮ್ಮನೊಂದಿಗೆ ಕೃಷಿಯಲ್ಲಿ ಭಾಗಿಯಾಗಿದ್ದಾರೆ. ಮನೆ ಬಳಿಯೇ ಮುಕ್ಕಾಲು ಎಕರೆ ಪ್ರದೇಶದ ಕೊಳದಲ್ಲಿ ದೊಡ್ಡ ಬಾಯಿ ಕಾಟ್ಲ, ರೋಹು, ಕಾಮನ್‌ಕಾರ್ಪ್, ಹುಲ್ಲು ಗೆಂಡೆ ಮೀನುಗಳನ್ನು ಸಾಕಲು ಇವರ ಪತ್ನಿ ಎಂ.ಬಿ. ಮಿನಿ ಅವರು ಗಮನಹರಿಸಿದ್ದಾರೆ. ಎಂ.ಟಿ. ಬೇಬಿ ಅವರ ಸಂಪರ್ಕ: 9448406482.

(ಲೇಖಕರು: ಕೃಷಿ ತಜ್ಞರು ಮತ್ತು ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಮಡಿಕೇರಿ)

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ
24 ಏಪ್ರಿಲ್ 2023
24 APRIL 2023
4
vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು



ಹಸಿರು ಆರ್ಥಿಕತೆ ಸುಸ್ಥಿರ ಅಭಿವೃದ್ಧಿ

2030ಕ್ಕೆ ಇಂಗಾಲದ ಇಳಿಕೆಯಿಂದ ಒಂದು ಟ್ರಿಲಿಯನ್ ಉಳಿತಾಯ

ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ-ತಂತ್ರಜ್ಞಾನ ಹಾಗೂ ಆವಿಷ್ಕಾರಗಳ ಭರಾಟೆಯಲ್ಲಿ ಪರಿಸರದ ಮೇಲೆ ಭಾರಿ ಪರಿಣಾಮ ಬೀರಿದೆ. ಅನಿಯಂತ್ರಿತ ಬೆಳವಣಿಗೆ ಹಾಗೂ ನಿರಂತರ ಅಭಿವೃದ್ಧಿಗೆ ಸ್ಪಷ್ಟ ದಿಕ್ಸೂಚಿ ಇಲ್ಲದೆ ಮನುಕುಲ ಹಲವು ಆಪತ್ತು-ವಿಪತ್ತುಗಳನ್ನು ಎದುರಿಸುವಂತಾಗಿದೆ. ಇವುಗಳಿಗೆ ಪರಿಹಾರ ಕಂಡುಕೊಳ್ಳುವ ಭರದಲ್ಲಿ ಮತ್ತೆ ಪರಿಸರದ ಮೇಲೆ ಸವಾರಿ ಮಾಡುವಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಆರ್ಥಿಕತೆಗೆ ಹೊಡೆತ ಬಿದ್ದಿದೆ. ಇದು ಇನ್ನೊಂದು ಬಗೆಯಲ್ಲಿ ಜೀವಸಂಕುಲವನ್ನು ಇಕ್ಕಟ್ಟಿಗೆ ಸಿಲುಕಿಸುವುದೇ ಆಗಿದೆ.

ಆರ್.ತುಳಸಿಕುಮಾರ್ ಬೆಂಗಳೂರು

ಮನುಷ್ಯನ ಬೇಕು, ಬೇಡಗಳನ್ನು ಪೂರೈಸುವ ಸಾಮರ್ಥ್ಯ ಭೂಮಿಗೆ ಇದೆಯಾದರೂ, ಆತನ ದುರಾಸೆಯನಲ್ಲ ಎಂಬ ಚಿಂತಕರ ಮಾತು ಅಭಿವೃದ್ಧಿ ಹೊಳೆಯಲ್ಲಿ ಕೊಚ್ಚಿಹೋಗುತ್ತಿದೆ. ಭವಿಷ್ಯದ ದೃಷ್ಟಿಯಿಂದ ಪರಿಸರಕ್ಕೆ ಆಗುತ್ತಿರುವ ಹಾನಿ ತಪ್ಪಿಸಲು ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲೇಬೇಕಾದ ಅನಿವಾರ್ಯತೆ ಇದೆ. ಇತ್ತೀಚಿನ ವರ್ಷಗಳಲ್ಲಿ ವಿದೇಶಗಳಲ್ಲಿ ಆಗಿರುವ ದುರ್ಘಟನೆಗಳು ಭಾರತಕ್ಕೆ ಎಚ್ಚರಿಕೆ ನೀಡಿವೆ. ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಪರಿಸರದ ಹಾನಿ ಪ್ರಮಾಣ ತುಸು ಕಡಿಮೆಯೇ. ಆದರೆ, ಆಗಾಧ ಜನಸಂಖ್ಯೆ ಹಾಗೂ ಅಭಿವೃದ್ಧಿ ನಾಗಾಲೋಟದ ಭರದಲ್ಲಿ ಭವಿಷ್ಯದ ಭಾರತ ಕೂಡ ಮಾಲಿನ್ಯಕ್ಕೆ ಒಳಗಾಗಿ ವಿವಿಧ ಸಮಸ್ಯೆಗಳಲ್ಲಿ ಸಿಲುಕುವ ಆಪಾಯವನ್ನು ತಳ್ಳಿಹಾಕುವಂತಿಲ್ಲ. ಅಂತಹ ಸ್ಥಿತಿ ಬಾರದಿರಲು ಎಲ್ಲ ಕ್ಷೇತ್ರಗಳಲ್ಲೂ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಬೇಕಿದೆ. ಆರ್ಥಿಕತೆಗೆ ಹಸಿರು ಸ್ವರೂಪ ನೀಡುವ ಉಪಕ್ರಮದಿಂದ ದೇಶದ ಅರ್ಥ ವ್ಯವಸ್ಥೆ ಹಳಿ ತಪ್ಪದಂತೆ ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆ ಎಂಬುದು ತಜ್ಞರ ಸಲಹೆ.

ಇಂಗಾಲದ ಸೈನೆಡ್ ತೂಗುಗತ್ತಿ!: ಪ್ರಸ್ತುತ ಭಾರತ ಜನಭರಿತ ದೇಶವಾಗಿ ಮಾರ್ಪಟ್ಟಿದೆ. ಇಷ್ಟೊಂದು ಬೃಹತ್ ಮಟ್ಟದ ಜನರಿಗೆ ನೀರು, ಆಹಾರ, ವಸತಿ, ಮೂಲಸೌಕರ್ಯ ಹಾಗೂ ಇತರ ಸವಲತ್ತು ಒದಗಿಸುವುದು ದೊಡ್ಡ ಸವಾಲಾಗಿದೆ. ಇತ್ತೀಚಿಗೆ ನಗರೀಕರಣದಿಂದ ಹೊಸ ಹೊಸ ಸಮಸ್ಯೆ ಉದ್ಭವಿಸುತ್ತಿವೆ. ಔದ್ಯಮಿಕ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ, ಹಳ್ಳಿಯಿಂದ ನಗರದತ್ತ ವಲಸೆ, ನಿರುದ್ಯೋಗ ಸಮಸ್ಯೆ ಎದುರಾಗಿದೆ. ಇವುಗಳ ನೇರ ಪರಿಣಾಮ ಜನರ ಜೀವನದ ಮೇಲೆಯೇ ಆಗಿದೆ. ನವದೆಹಲಿಯಲ್ಲಿ ಚಳಿಗಾಲದ ವೇಳೆ ಮಾಲಿನ್ಯ ಹೆಚ್ಚಾಗಿ ಪ್ರಾಣವಾಯು ಕುಸಿತದಿಂದಾಗಿ ಶಾಲೆಗಳಿಗೆ ರಜೆ ನೀಡಿ ಮಕ್ಕಳನ್ನು ಮನೆಯಲ್ಲೇ ಜೋಪಾನ ಮಾಡುವಂತಹ ಸ್ಥಿತಿ ನಿರ್ಮಾಣವಾಗಿರುವುದು ಇದಕ್ಕೊಂದು ತಾಜಾ ಉದಾಹರಣೆ. ಇಂತಹ ಹಲವು ಆಪಾಯಗಳು ಕ್ರಮೇಣ ಬೃಹದಾಕಾರವಾಗುವ ಸಾಧ್ಯತೆ ಇದೆ. ಆದರಲ್ಲೂ ಇಂಗಾಲದ ಮಟ್ಟ ಆಪಾಯದ ಎಚ್ಚರಿಕೆ ನೀಡಿದೆ. ಇದು ಸೈನೆಡ್ ರೀತಿ ಒಂದೇ ಬಾರಿ ಮನುಕುಲಕ್ಕೆ ಆಪಾಯ ತಂದೊಡ್ಡುವ ಭೀತಿ ಎದುರಾಗಿದೆ. ಈ ಸಮಸ್ಯೆಗಳನ್ನು ಜಾಣ್ಮೆಯಿಂದ ಪರಿಹರಿಸಿಕೊಳ್ಳಲು ಸುಸ್ಥಿರ ಅಭಿವೃದ್ಧಿಗೆ ಮಣೆ ಹಾಕಬೇಕಿದೆ.



ಯೋಜನೆಗಳಿಗೆ ಹಸಿರು ಹೊದಿಕೆ: ಭಾರತ ಡಿಜಿಟಲ್ ಯುಗಕ್ಕೆ ಕಾಲಿಡುತ್ತಿದ್ದಂತೆ ಅಭಿವೃದ್ಧಿ ರಾಷ್ಟ್ರವಾಗುವತ್ತ ದಾಪುಗಾಲಿಟ್ಟಿದೆ. ಈ ಬದಲಾವಣೆಯ ಕಾಲಘಟ್ಟದಲ್ಲಿ ಬೃಹತ್ ಸಂಖ್ಯೆಯ ಅಭಿವೃದ್ಧಿ ಪೂರಕ ಕಾರ್ಯಕ್ರಮಗಳು ಮುನ್ನೆಲೆಗೆ ಬಂದಿವೆ. ಅದರಲ್ಲೂ ಹಲವು ಲಕ್ಷ ಕೋಟಿ ಮೊತ್ತದ ಮೂಲಸೌಕರ್ಯ ಯೋಜನೆಗಳು ಘೋಷಣೆಯಾಗಿವೆ. ಇವುಗಳು ಒಂದೇ ಬಾರಿ ಅನುಷ್ಠಾನ ಆದಲ್ಲಿ ಪರಿಸರದ ಮೇಲೆ ಪರಿಣಾಮ ಬೀರುವುದು ತಥಾಸಿದ್ಧ. ಹೀಗಾಗಿಯೇ ಈ ಎಲ್ಲ ಯೋಜನೆಗಳನ್ನು ಹಸಿರು ಯೋಜನೆಗಳಾಗಿ ಪರಿವರ್ತಿಸಿ ಜಾರಿಗೊಳಿಸುವ ತೀರ್ಮಾನ ಪರಿಸರಸ್ನೇಹಿ ನೀತಿ ಆಯೋಗದಿಂದ ಆನುಸರಿಸುವ ಮೊದಲ ಮೆಟ್ಟಿಲಾಗಿದೆ. ಗ್ರೀನ್‌ಫೀಲ್ಡ್ ವಿಮಾನನಿಲ್ದಾಣ, ಹಸಿರು ಹೆದ್ದಾರಿ, ಹಸಿರು ಕಟ್ಟಡಗಳ ಸಹಿತ ಎಲ್ಲ ಯೋಜನೆಗಳಿಗೂ ಗ್ರೀನ್ ಟಚ್ ನೀಡಲಾಗುತ್ತಿದೆ. ಅದರಲ್ಲೂ ವಸತಿ ಯೋಜನೆಗಳಲ್ಲಿ ಸೌರ ವಿದ್ಯುತ್, ಪವನ ವಿದ್ಯುತ್, ಮಳೆಕೊಯ್ಲು, ಟ್ರೀ ಪಾರ್ಕ್ ಒಳಗೊಳ್ಳುವಿಕೆಗೆ ಒತ್ತು ನೀಡಲಾಗುತ್ತಿದೆ. ಜತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಸಿರು ಬಾಂಡ್ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಡೀಕರಣಕ್ಕೆ ಒತ್ತು ನೀಡಿರುವುದು ಖಾಸಗಿ ವಲಯವೂ ಹಸಿರು ಆರ್ಥಿಕತೆಯತ್ತ ದೃಷ್ಟಿ ಹರಿಸಲು ಸಾಧ್ಯವಾಗಿದೆ.

ರಾಜ್ಯಕ್ಕೆ ಮೂರನೇ ಸ್ಥಾನ

ದೇಶದಲ್ಲಿ ಪ್ರಗತಿಪರ ರಾಜ್ಯವೆಂದು ಹೆಸರು ಪಡೆದಿರುವ ಕರ್ನಾಟಕ ಹಸಿರು ಆರ್ಥಿಕತೆ ವಿಚಾರವಾಗಿ ಸಕಾರಾತ್ಮಕ ನೀತಿ ನಿರ್ಧಾರಗಳನ್ನು ಕೈಗೊಂಡಿದೆ. ಮುಖ್ಯವಾಗಿ ತಂತ್ರಜ್ಞಾನ ಆಧಾರಿತ ಸೂಕ್ಷ್ಮ ನೀರಾವರಿ, ನವೀಕರಿಸಬಹುದಾದ ಇಂಧನ, ಇ-ವಾಹನಗಳ ಬಳಕೆ, ಅರಣ್ಯಾಭಿವೃದ್ಧಿ, ತ್ಯಾಜ್ಯ ನಿರ್ವಹಣೆ, ಹಸಿರು ಕಟ್ಟಡಗಳ ನಿರ್ಮಾಣದಲ್ಲಿ ಪರಿಸರಸ್ನೇಹಿ ಹೆಜ್ಜೆಗಳನ್ನು ಇಡುತ್ತಿದೆ. ಜತೆಗೆ ವಿವಿಧ ಬಾಬ್ತಿನಿಂದ ಹಸಿರು ಬಾಂಡ್‌ಗಳ ಮೂಲಕ ಸಂಪನ್ಮೂಲ ಸಂಗ್ರಹಕ್ಕೆ ಒತ್ತು ನೀಡಿದೆ. ಈ ಪ್ರಗತಿಪರ ನಿಲುವಿನಿಂದಾಗಿ ಕರ್ನಾಟಕವು ನೀತಿ ಆಯೋಗದ ಸುಸ್ಥಿರ ಅಭಿವೃದ್ಧಿ ಬೆಳವಣಿಗೆ (ಎಸ್‌ಡಿಜಿ) ಸೂಚ್ಯಂಕ 2020-21ರ ಸರ್ವೇಯಲ್ಲಿ 3ನೇ ಸ್ಥಾನ ಪಡೆದುಕೊಂಡಿದೆ.

ಎಸ್‌ಡಿಜಿಯ 17 ಅಂಶಗಳು

ಮನುಜರ ಒಳಿತಿಗಾಗಿ ಹಾಗೂ ಉತ್ತಮ ಜೀವನ ಸಾಧಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆ 17 ಅಂಶಗಳ ಜಾಗತಿಕ ಗುರಿಯ ನೀಲನಕ್ಷೆಯನ್ನು ಪ್ರಕಟಿಸಿದೆ. 2030ರೊಳಗೆ ಅವುಗಳನ್ನು ಪರಿಪಾಲಿಸಿ ಗುರಿ ತಲುಪುವಲ್ಲಿ ಪ್ರಾಮಾಣಿಕತೆ ಪ್ರದರ್ಶಿಸುವಂತೆ ಸದಸ್ಯ ರಾಷ್ಟ್ರಗಳಿಗೆ ಮನವಿ ಮಾಡಲಾಗಿದೆ. ಆದರನ್ನಯ ಬಡತನ ನಿವಾರಣೆ, ಶೂನ್ಯ ಹಸಿವು, ಉತ್ತಮ ಆರೋಗ್ಯ, ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ, ಸ್ವಚ್ಛ ನೀರು-ನೈರ್ಮಲ್ಯ, ಕೈಗೆಟಕುವ ದರದ ನವೀಕರಿಸಬಹುದಾದ ಇಂಧನ, ಪ್ರಾಮಾಣಿಕ ಕಾರ್ಯದಿಂದ ಆರ್ಥಿಕ ಪ್ರಗತಿ, ಕೈಗಾರಿಕೆ- ಆವಿಷ್ಕಾರ-ಮೂಲಸೌಕರ್ಯ, ಅಸಮಾನತೆ ನಿವಾರಣೆ, ಸುಸ್ಥಿರ ನಗರ, ಸಮುದಾಯ ನಿರ್ಮಾಣ, ಜವಾಬ್ದಾರಿಯುತ ಬಳಕೆ-ಉತ್ಪಾದನೆ, ಹವಾಮಾನ ಕಾರ್ಯಸೂಚಿ, ಸಾಗರ ಜೀವಿ ಸಂಕುಲ ರಕ್ಷಣೆ, ಭೂಮಿ ಮೇಲಿನ ಜೀವಿ ಸಂಕುಲ ಸಂರಕ್ಷಣೆ, ಶಾಂತಿ-ನ್ಯಾಯ-ಸಂಸ್ಥೆಗಳ ಸಬಲೀಕರಣ, ಗುರಿ ತಲುಪಲು ಸಹಭಾಗಿತ್ವ -ಇವೇ 17 ಅಂಶಗಳಾಗಿವೆ.



15 ಟ್ರಿಲಿಯನ್ ಮೊತ್ತ ಉಳಿತಾಯ

ಭಾರತದಲ್ಲಿ 2030ರ ಅವಧಿಯೊಳಗೆ ಪರಿಸರದ ಮೇಲಾಗುತ್ತಿರುವ ವಿವಿಧ ರೀತಿಯ ಮಾಲಿನ್ಯದಿಂದ 1 ಟ್ರಿಲಿಯನ್ ಡಾಲರ್ ಹಣ ಉಳಿಸಬಹುದಾಗಿದೆ. ಅಲ್ಲದೆ, 2070ರ ವೇಳೆಗೆ ಶೂನ್ಯ ಇಂಗಾಲ ಉತ್ಪಾದನೆಯಲ್ಲಿ ಯಶಸ್ವಿ ಕಂಡಲ್ಲಿ 15 ಟ್ರಿಲಿಯನ್ ಡಾಲರ್ ಉಳಿತಾಯ ಮಾಡಲು ಸಾಧ್ಯವಿದೆ. ತಪ್ಪಿದ್ದಲ್ಲಿ ಅಷ್ಟರ ಮಟ್ಟಿಗೆ ಆರ್ಥಿಕತೆಗೆ ಹೊಡೆತ ಬೀಳುವ ಆಪಾಯವೂ ಇದೆ ಎಂಬುದಾಗಿ 2022ರ ವಿಶ್ವ ಆರ್ಥಿಕ ವೇದಿಕೆ ಅಂದಾಜಿಸಿದೆ.



ಬೆಂಗಳೂರಿಗೂ ಕಾದಿದೆ ಗಂಡಾಂತರ?

ಇಡೀ ವಿಶ್ವದಲ್ಲಿ ಬೆಂಗಳೂರು ದೊಡ್ಡ ಪ್ರಮಾಣದಲ್ಲಿ ಬೆಳೆವಣಿಗೆ ಕಾಣುತ್ತಿದೆ. ಇದರಿಂದ ಕೆಲಮಟ್ಟಿಗೆ ಲಾಭ ಉಂಟಾಗುವುದಿದ್ದರೂ, ಅಷ್ಟೇ ಪ್ರಮಾಣದಲ್ಲಿ ಸಮಸ್ಯೆ ಉದ್ಭವಿಸುತ್ತಿವೆ. ಅದರಲ್ಲೂ ನಗರದ ಹಸಿರಿನ ಹೊದಿಕೆ ಕ್ಷೀಣಿಸುತ್ತಿದೆ. ಪ್ರಸ್ತುತ ನಗರದಲ್ಲಿ 1.04 ಕೋಟಿ ವಾಹನಗಳಿದ್ದು, ಮುಂದಿನ ದಶಕದಲ್ಲಿ ಮತ್ತಷ್ಟು ಏರಲಿದೆ. ಜತೆಗೆ 2040ರ ವೇಳೆ ಬೆಂಗಳೂರಿನ ಜನಸಂಖ್ಯೆ 2 ಕೋಟಿ ದಾಟುವ ನಿರೀಕ್ಷೆ ಇದೆ. ಈ ಆಗಾಧ ಬೆಳವಣಿಗೆಯಿಂದ ಇನ್ನಷ್ಟು ಹಸಿರು ಮಾಯವಾಗಿ ಅಂತರ್ಜಲ ಮಟ್ಟ ಮತ್ತಷ್ಟು ಕುಸಿಯಬಹುದು. ಕುಡಿಯುವ ನೀರಿಗೂ ಅಭಾವ ತಟ್ಟಬಹುದು. ಮಾಲಿನ್ಯ ಪ್ರಮಾಣ ಹೆಚ್ಚಳಗೊಂಡು ಪ್ರಾಣವಾಯು ಕುಸಿತದಿಂದ ಜನರ ವಾಸಯೋಗ್ಯ ನಗರವಾಗಿ ಉಳಿದುಕೊಳ್ಳಲು ಸಾಧ್ಯವಾಗದಿರುವ ಸ್ಥಿತಿ ಉದ್ಭವಿಸಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಸಂಕಷ್ಟದಲ್ಲಿ ತ್ರಿಪುರಾ ಚಹಾ ಬೆಳೆಗಾರರು: ಸಂತೋಷ್ ಸಹಾ



ಅಗರ್ತಲಾ: ಈಶಾನ್ಯ ರಾಜ್ಯಗಳಲ್ಲಿ ಮುಂದುವರಿದಿರುವ ಸುದೀರ್ಘ ಕಾಲದ ಒಣ ಹವೆ ಮತ್ತು ದರ ಕುಸಿತದ ಪರಿಣಾಮವಾಗಿ ತ್ರಿಪುರಾದ ಚಹಾ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಇದರಿಂದ ಚಹಾ ಉತ್ಪಾದನೆಯಲ್ಲೂ ತೀವ್ರ ಕುಸಿತ ಕಂಡುಬಂದಿದೆ.

ವಾರ್ಷಿಕ 90 ಲಕ್ಷ ಕೆಜಿ ಚಹಾ ಬೆಳೆಯುವ ತ್ರಿಪುರಾದಲ್ಲಿ ರಾಜ್ಯದಲ್ಲಿ ಸರಕಾರಿ ಸ್ವಾಮ್ಯದ ಐದು ಎಸ್ಟೇಟ್‌ಗಳು ಹಾಗೂ ಎರಡು ಉತ್ಪಾದನಾ ಘಟಕಗಳೂ ಇವೆ. ಚಹಾ ಉತ್ಪಾದನಾ ವೆಚ್ಚ ಪ್ರತಿ ಕೆಜಿಗೆ 160ರಿಂದ 170 ರೂ. ತಲುಪಿದ್ದು, ಕಳೆದ ಅಕ್ಟೋಬರ್‌ನಲ್ಲಿ ಪ್ರತಿ ಕೆಜಿ ಚಹಾದ ದರ 150 ರೂ.ಗಳಿಗೆ ಕುಸಿದಿತ್ತು.

''ರಾಜ್ಯ ಸರಕಾರ ಭತ್ತಕ್ಕೆ ನೀಡುವಂತೆ ಚಹಾಕ್ಕೆ ಬೆಂಬಲ ಬೆಲೆ ನೀಡುವುದಿಲ್ಲ. ಇಡೀ ದೇಶದಲ್ಲಿ ಇಂತಹ ಅನಿಶ್ಚಿತತೆ ತಲೆದೋರಿದ್ದು, ಚಹಾ ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದಾರೆ,'' ಎಂದು ತ್ರಿಪುರಾ ಟೀ ಡೆವಲಪ್‌ಮೆಂಟ್ ಕಾರ್ಪೊರೇಶನ್ (ಟಿಟಿಡಿಸಿ) ಅಧ್ಯಕ್ಷ ಸಂತೋಷ್ ಸಹಾ ಹೇಳಿದ್ದಾರೆ.

24-04-2023
V-karanataka Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

ಮಾಡಿಕೆರೆ, ಪೂಜನಹಳ್ಳಿಯ ಪ್ಯಾಕ್‌ಹೌಸ್ ಮೂಲಕ ಸಾವಿರಾರು ಟನ್ ಹಣ್ಣು ಮತ್ತು ಪಲ್ಪ್ ರವಾನೆ

ಯುರೋಪ್ ರಾಷ್ಟ್ರಗಳಿಗೆ ಕರುನಾಡ ಮಾವು

■ ಪುಣ್ಯವತಿ .ಎಚ್.ಪಿ ಬೆಂಗಳೂರು
punyavathi.hp@timesgroup.com

ರಾಜ್ಯದ ಮಾವಿನ ಹಣ್ಣುಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ ಬರುತ್ತಿದೆ. ರಾಜ್ಯ, ಹೊರರಾಜ್ಯ ಹಾಗೂ ವಿದೇಶ ಗಳಲ್ಲೂ ಹಣ್ಣಿನ ಪ್ರಿಯರಿಂದ ಬೇಡಿಕೆ ಬರತೊಡಗಿದೆ.

ಎರಡು ವರ್ಷಗಳಿಂದ ಕರ್ನಾಟಕದ ಮಾವು ಹೊರ ರಾಷ್ಟ್ರಗಳಿಗೆ ರಫ್ತಾಗಿರಲಿಲ್ಲ ಈ ಬಾರಿ ಗಲ್ಫ್ ರಾಷ್ಟ್ರಗಳು, ಭಾಂಗ್ಲಾದೇಶ, ಲಂಡನ್, ಸೌದಿ ಅರೇಬಿಯಾ, ಕುವೈತ್, ಸಿಂಗಾಪುರ, ಕತಾರ್ ಮತ್ತು ಅಮೆರಿಕ ಮತ್ತಿತರ ರಾಷ್ಟ್ರಗಳಿಗೆ ಗುಣಮಟ್ಟದ ತಾಜಾ ಮಾವಿನ ಹೆಣ್ಣು ಮತ್ತು ಸಂಸ್ಕರಿತ ಹಣ್ಣಿನ ಪಲ್ಪ್ ಕೂಡ ರಫ್ತಾಗಲಿದೆ.

ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಚಿಂತಾಮಣಿಯ ಮಾಡಿಕೆರೆ ಯಲ್ಲಿ ಸುಸಜ್ಜಿತ ಪ್ಯಾಕ್‌ಹೌಸ್ ನಿರ್ಮಿಸಲಾಗಿದೆ. ಜತೆಗೆ ಈ ಬಾರಿ ದೇವನಹಳ್ಳಿ ವಿಮಾನ ನಿಲ್ದಾಣ ರಸ್ತೆಯ ಪೂಜನಹಳ್ಳಿಯಲ್ಲಿ ಕೆಪೆಕ್ ಸಂಸ್ಥೆ ವತಿಯಿಂದ ಬೃಹತ್ ಪ್ಯಾಕ್‌ಹೌಸ್ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಇಲ್ಲಿ ನಡೆಯುವ ನಾನಾ ವಿಧದ ಪ್ಯಾಕಿಂಗ್ ಪ್ರಕ್ರಿಯೆಯನ್ನು ತಾಂತ್ರಿಕ ತಜ್ಞರ ನಿಯೋಗ ಕೂಡ ಬಂದು ಪರಿಶೀಲಿಸುತ್ತಿದೆ.

ಏರು ಹಂಗಾಮು ಹುಸಿಯಾಯ್ತು

''ಈ ವರ್ಷ ಮಾವು ಏರು ಹಂಗಾಮು ರೀತಿ ಹೂವು ಬಿಟ್ಟಿತ್ತು. ಆದರೆ ಕಳೆದ ತಿಂಗಳು ಸುರಿದ ಅಕಾಲಿಕ ಮಳೆಯಿಂದ ಹೂವು ಉದುರಿ ಹೋಯಿತು. ಅಷ್ಟೇ ಅಲ್ಲ, ಉಳಿದ ಹೂವು ಕಾಯಿ ಬಿಟ್ಟಿದ್ದರೂ, ಬಿಸಿಲ ಝಳಕ್ಕೆ ಅವೂ ಉದುರುತ್ತಿವೆ. ಹೀಗಾಗಿ ಏರು ಹಂಗಾಮಿನ ಬೆಳೆ ಇಳಿ ಹಂಗಾಮಾಗಿದೆ,'' ಎನ್ನುತ್ತಾರೆ ಸಿ.ಜಿ.ನಾಗರಾಜ್.

ಬಿಸಿಲು ಹೆಚ್ಚಿದ್ದರೆ ಮಾವಿನಲ್ಲಿ ಸಿಹಿ ಹೆಚ್ಚು

ಮಾವಿನಹಣ್ಣು ಸಾಮಾನ್ಯವಾಗಿ ಬೇಸಿಗೆಯ ಆರಂಭದಲ್ಲಿ ಬರುತ್ತದೆ. ಕಾಯಿಯಾದ ನಂತರ ಬಿಸಿಲಿನ ಪ್ರಮಾಣ ಹೆಚ್ಚಿದ್ದರೆ ಮಾವಿನ ಹಣ್ಣಿನಲ್ಲಿ ಸಿಹಿಯ ಪ್ರಮಾಣ ಹೆಚ್ಚಾಗುತ್ತದೆ ಎನ್ನುತ್ತಾರೆ ಮಾವು ತಜ್ಞರು.



ಮಾವು ಬೆಳೆಯಲ್ಲಿ ಮೂರು ವಲಯ

ಪ್ರಸ್ತುತ ಕರ್ನಾಟಕದಲ್ಲಿ 1.9 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಬೆಳೆ ಇದೆ. ಏರು ಹಂಗಾಮಿನಲ್ಲಿ ಸುಮಾರು 12-15 ಲಕ್ಷ ಟನ್ ಹಾಗೂ ಇಳಿ ಹಂಗಾಮಿನಲ್ಲಿ 7-8 ಲಕ್ಷ ಟನ್ ಹಣ್ಣು ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ಮುಖ್ಯವಾಗಿ ಮೂರು ಮಾವು ಬೆಳೆ ವಲಯಗಳಿವೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳನ್ನು ಒಂದನೇ ವಲಯ ಎಂದು ಗುರುತಿಸಲಾಗಿದೆ. ಈ ವಲಯದಲ್ಲಿ ಶೇ.75 ರಷ್ಟು ಮಾವು ಬೆಳೆಯಲಾಗುತ್ತದೆ. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ ಎರಡನೇ ವಲಯ (ಶೇ.20) ಹಾಗೂ ಬೀದರ್, ಕೊಪ್ಪಳ, ಬಾಗಲಕೋಟ, ಚಿತ್ರದುರ್ಗ, ರಾಣೆಬೆನ್ನೂರು, ದಾವಣಗೆರೆ ಮೂರನೇ ವಲಯಕ್ಕೆ ಸೇರುವ ಬಿಡಿ ಪ್ರದೇಶಗಳು. ಇಲ್ಲಿ ಶೇ.5ರಷ್ಟು ಮಾವು ಬೆಳೆಯಲಾಗುತ್ತದೆ.

''ಕಳೆದ ತಿಂಗಳು ಫ್ರಾನ್ಸ್‌ಗೆ 400 ಕೆ.ಜಿ ಮಾವಿನ ಹಣ್ಣುಗಳ ಸ್ಯಾಂಪಲ್ ಕಳುಹಿಸಿದ್ದೆವು. ಈಗ 100 ಟನ್ ಮಾವಿನಹಣ್ಣನ್ನು ಚಿಂತಾಮಣಿಯ ಮಾಡಿಕೆರೆ ಪ್ಯಾಕ್ ಹೌಸ್‌ನಿಂದ ರಫ್ತು ಮಾಡಲಾಗುವುದು. ಬಾದಾಮಿ, ಮಲ್ಲಿಕಾ, ಬಂಗನಪಲ್ಲಿ ಮತ್ತಿತರ ಹಣ್ಣುಗಳನ್ನು ಕಳುಹಿಸಲಾಗುವುದು,'' ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ.ನಾಗರಾಜ್ ತಿಳಿಸಿದರು.

''ಕೆಪೆಕ್‌ನವರು ಪೂಜನಹಳ್ಳಿಯಲ್ಲಿ ನಿರ್ಮಿಸಿರುವ ಪ್ಯಾಕ್‌ಹೌಸ್ ಸಂಕೀರ್ಣದಿಂದ ಸಹಸ್ರಾರು ಟನ್ ಮಾವು ಮತ್ತು ಮಾವಿನ ಪಲ್ಪ್ ರಫ್ತಾಗಲಿದೆ,'' ಎಂದು ಕೆಪೆಕ್‌ನ ಕನ್ಸಲ್ಟೆಂಟ್‌ನ ಆಹಾರ ಸಂಸ್ಕರಣೆ ಅಧಿಕಾರಿ ಹೇಳಿದರು.

ಈಗ ರಾಮನಗರ ಭಾಗದ ಹಣ್ಣು ಮಾರುಕಟ್ಟೆಗೆ ಬಂದಿದೆ. ಕೋಲಾರದ ಮಾವು ತಡವಾಗಿದ್ದು, ಮೇ ತಿಂಗಳಲ್ಲಿ ಬರಲಿದೆ. ಎಂದಿನಂತೆ ಮಾವು ಅಭಿವೃದ್ಧಿ ನಿಗಮವು ಮೇ ತಿಂಗಳಲ್ಲಿ ಅಂಚೆ ಮೂಲಕ ಮಾವು ಮಾರಾಟಕ್ಕೆ ಪೋರ್ಟಲ್ ಪರಿಚಯಿಸಲಿದೆ. ಮ್ಯಾಂಗೊ ಪಿಕ್ಕಿಂಗ್ ಟೂರ್ ಆಯೋಜನೆ ಸೇರಿದಂತೆ ಇತರೆ ಕ್ರಮಗಳ ಮೂಲಕ ರೈತರು ಮತ್ತು ಗ್ರಾಹಕರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಲಾಗುವುದು.

-ಸಿ.ಜಿ.ನಾಗರಾಜ್ ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ

24-04-2023
V-karanataka Pg 04